ಆ) ೧೯೮೬-೮೭ನೇ ಸಾಲಿನಲ್ಲಿ (೩೧-೩-೧೯೮೭ರಲ್ಲಿ) ಇದ್ದ ಬಾಕಿ ಹಣ,

	ಲಕ್ಷ ರೂಗಳಲ್ಲಿ
ಸಂಪರ್ಕ ಮತ್ತು ಕಟ್ಟಡಗಳ ವಿಭಾಗ	೮೮೭.೧೬
ನೀರಾವರಿ ಇಲಾಖೆ	೧೭೪೧.೮೫
	೨೬೨೯.೦೧

ಇ ಮತ್ತು ಈ) ಸಾಧನ ಸಂಪತ್ತುಗಳನ್ನಾಧರಿಸಿ ಬಾಕಿ ಇರುವ ಬಿಲ್ಲುಗಳನ್ನು ಪಾವತಿ ಮಾಡಲು ಹಣ ಬಿಡುಗಡೆ ಮಾಡಲಾಗುವುದು.

ಶಿಕಾರಿಪುರ ಪ್ರಥಮ ದರ್ಜೆ ಕಾಲೇಜು ಕಟ್ಟಡದ ನಿರ್ಮಾಣದ ಬಗ್ಗೆ

೧೩೮. ಶ್ರೀ ಬಿ. ಎಸ್. ಯಡಿಯೂರಪ್ಪ, (ಶಿಕಾರಿಪುರ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಶಿಕಾರಿಪುರ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಕಟ್ಟಲು ಸಾರ್ವಜನಿಕರಿಂದ ಬಂದಿರುವ ವಂತಿಗೆ ಎಷ್ಟು ?

ಆ) ೧೯೮೫-೮೬, ೧೯೮೬-೮೭ ರ ಆಯವ್ಯಯದಲ್ಲಿ ಸದರೀ ಕಟ್ಟಡಕ್ಕೆ ಮಂಜೂರು ಮಾಡಲಾಗಿರುವ ಹಣವೆಷ್ಟು ; ಹಾಗೂ ಖರ್ಚಾಗಿರುವ ಹಣವೆಷ್ಟು ?

ಇ) ಕೊಡಗು ಜಿಲ್ಲೆಯಲ್ಲಿ ಈ ಕಾಲೇಜ್ ಕಟ್ಟಡದ ಜೊತೆ ಮಂಜೂರು ಆದ ಪ್ರಥಮ ದರ್ಜೆ ಕಾಲೇಜಿನ ಕಟ್ಟಡಕ್ಕೆ ಈವರೆಗೆ ಸರ್ಕಾರದವರು ಹಣ ಎಷ್ಟು ಖರ್ಚು ಮಾಡಿದ್ದಾರೆ ?

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) ೧ ಲಕ್ಷ ರೂ. ವಂತಿಗೆ ಹಣ ನೀಡಲಾಗಿದೆ.

ಆ)

ವರ್ಷ	ಅನುದಾನ	ಖರ್ಚು
೮೫-೮೬	೩೦,೦೦೦	೩೮,೬೭೩
೮೬-೮೭	೨, ೦೦,೦೦೦	೪೨,೦೩೫
		ಒಟ್ಟು ೮೦,೦೭೮ ರೂ. ಗಳು

ಇ) ೬,೯೮,೪೪೬ ರೂ.ಗಳು

ಶಿಕಾರಿಪುರ ತಾಲ್ಲೂಕು ಕಂಬೈಂಡ್ ಆಸ್ಪತ್ರೆ ಕಟ್ಟಡದ ನಿರ್ಮಾಣದ ಬಗ್ಗೆ.

೧೩೯. ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಶಿಕಾರಿಪುರ ತಾಲ್ಲೂಕು ಕಂಬೈಂಡ್ ಆಸ್ಪತ್ರೆ ಕಟ್ಟಡಕ್ಕಾಗಿ ೧೯೮೬-೮೭ ನೇ ಸಾಲಿಗೆ ಸರಕಾರದವರು ಆಯವ್ಯಯದಲ್ಲಿ ಕೊಟ್ಟಿರುವ ಹಣವೆಷ್ಟು ಹಾಗೂ ಈವರೆಗೆ ಖರ್ಚಾದ ಹಣವೆಷ್ಟು ?

ಆ) ಸದರಿ ಆಸ್ಪತ್ರೆ ಕಟ್ಟಡ ನಿರ್ಮಾಣ ಅರ್ಧಕ್ಕೆ ಸ್ಥಗಿತಗೊಂಡು, ಮಳೆಗಾಲದಲ್ಲಿ ಸ್ಥಗಿತಗೊಂಡಿರುವ ಕಟ್ಟಡ ಕುಸಿದು ಬೀಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಇ) ಹಾಗಿದ್ದಲ್ಲಿ ಸದರಿ ಕಟ್ಟಡ ನಿರ್ಮಾಣ ಪೂರ್ಣ ಮಾಡಲು ಸರ್ಕಾರವು ಕೂಡಲೇ ಕ್ರಮ ಕೈಗೊಳ್ಳುವುದೇ ?

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) ೨.೫೦ ಲಕ್ಷ ರೂಪಾಯಿಗಳ ಅನುದಾನವಿತ್ತು ಮತ್ತು ಇದುವರೆಗೆ ೬.೦೮ ಲಕ್ಷ ರೂ.ಹಣ ಖರ್ಚಾಗಿರುತ್ತದೆ.

ಆ) ಕುಸಿದು ಬೀಳುವಂತ ಪರಿಸ್ಥಿತಿ ಇರುವುದಿಲ್ಲ.

ಇ) ೧೯೮೭-೮೮ ನೇ ಸಾಲಿನಿಂದ ಶಿವಮೊಗ್ಗ ಜಿಲ್ಲಾಪರಿಷತ್ತಿಗೆ ಸೇರಿರುವುದರಿಂದ. ಕೆಲಸ ಅವರಿಂದ ಪೂರೈಸಬೇಕಾಗುತ್ತದೆ.

ರೈತರಿಗೆ ಬೀಜ ಹಾಗೂ ಗೊಬ್ಬರ ವಿತರಣೆ ಮಾಡುವ ಬಗ್ಗೆ

೬೨. ಶ್ರೀ ಲಕ್ಕಪ್ಪ (ಚಿಕ್ಕನಾಯಕನ ಹಳ್ಳಿ).—ಮಾನ್ಯ ಕೃಷಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಹಾಗೂ ಹರಿಜನ ಗಿರಿಜನರಿಗೆ ಬೀಜ ಹಾಗೂ ಗೊಬ್ಬರ ವಿತರಣೆ ಮಾಡಲು ೧೯೮೭-೮೮ ನೇ ಸಾಲಿನಲ್ಲಿ ರಾಜ್ಯ ಸರ್ಕಾರ ಸಂಗ್ರಹಿಸಿದ್ದ ಬೀಜ ಮತ್ತು ಗೊಬ್ಬರ ಪ್ರಮಾಣವೆಷ್ಟು ?

ಆ) ಸದರಿ ಬೀಜ ಹಾಗೂ ಗೊಬ್ಬರವನ್ನು ರೈತರಿಗೆ ಸಕಾಲದಲ್ಲಿ ಅಂದರೆ ಮೇ-ಜೂನ್ ತಿಂಗಳುಗಳ ಬಿತ್ತನೆ ಕಾಲದಲ್ಲಿ ಫಲಾನುಭವಿಗಳಿಗೆ ಹಂಚಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಬಂದಿದ್ದಲ್ಲಿ ಸದರಿ ವಿಳಂಬಕ್ಕೆ ಕಾರಣವೇನು ?

ಶ್ರೀ ಆರ್.ವಿ. ದೇಶಪಾಂಡೆ (ಕೃಷಿ ಸಚಿವರು).—

ಅ) ಕೇಂದ್ರ ಪುರಸ್ಕೃತ ಯೋಜನೆ ಜುಡಿಯಲ್ಲಿ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಹಾಗೂ ಹರಿಜನ ಗಿರಿಜನರಿಗೆ ಕೃಷಿ ಉತ್ಪಾದನೆ ಹೆಚ್ಚಿಸಲು ಬೀಜದ ಬಿತ್ತಿಗಳನ್ನು ಮಾತ್ರ ವಿತರಣೆ ಮಾಡಲಾಗುತ್ತದೆ. ಗೊಬ್ಬರ ವಿತರಣೆ ಮಾಡುತ್ತಿಲ್ಲ. ೧೯೮೭-೮೮ ನೇ ಸಾಲಿನಲ್ಲಿ ಇಡಿಕೊಂಡಿರುವ ಗುರಿ ಮತ್ತು ಸಂಗ್ರಹ ಮಾಡಲಾದ ಪ್ರಮಾಣ ಈ ಕೆಳಕಂಡಂತಿವೆ.

ಕ್ರಮ ಸಂಖ್ಯೆ	ಬೆಳೆಯ ಹೆಸರು	ಮುಂಗಾರು ಹಂಗಾಮು		ಹಿಂಗಾರು ಬೇಸಿಗೆ ಹಂಗಾಮು	
		ಗುರಿ	ಸಂಗ್ರಹಿಸಿದ ಬೀಜದ ಪ್ರಮಾಣ (ಕ್ವಿಂಟಾಲುಗಳಲ್ಲಿ)	ಗುರಿ	ಸಂಗ್ರಹಿಸಿದ ಪ್ರಮಾಣ ಪ್ರಮಾಣ (ಕ್ವಿಂಟಾಲಂಗಳಲ್ಲಿ)
೧	ರಾಗಿ	೭೯೩	೫೦೩	೨೨೦	ಸೆಪ್ಟೆಂಬರ್
೨	ಜೋಳ	೫೩೨	೫೦೬	೧೫೧	ಅಕ್ಟೋಬರ್
೩	ಮುಸುಕಿನ ಜೋಳ	೩೯೨	೩೧೫	—	ನಂತರ ಸಂಗ್ರಹಿಸಲು
೪	ಸಜ್ಜೆ	೧೧೫	೭೭	—	ಕ್ರಮ ಕೈಗೊಳ್ಳಲಾಗುತ್ತದೆ.
೫	ಹೆಸರು	೩೪೨	೧೫೫	೧೪೦	
೬	ಉದ್ದು	೧೪೦	೭೦	೧೧೫	
೭	ಅಲಸಂದಿ	೪೩೧	೩೪೩	೨೦೬	